<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>

<u>ಪೊನ್ನಂಪೇಟೆ</u>

**ಸಿ.ಸಿ. ನಂ. 810/2017** **ಪ್ರಾ.ಸಾ –3**

**ಚಾ.ಸಾ – 1**

<u>ದಿನಾಂಕಃ **27.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | | |
|---|---|---|
| ಸಾಕ್ಷಿಯ ಹೆಸರು | : | ಸಂಶೀರ್ |
| ತಂದೆಯ ಹೆಸರು | : | ಪೋಕರ್ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ವೈನಾಡ್, ಕೇರಳ |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಸಾಕ್ಷಿಯು ಮಲೆಯಾಳಂ ಭಾಷೆ ಬಲ್ಲವರಾಗಿದ್ದು ಅವರಿಗೆ ಕನ್ನಡ ಓದಲು ಬರೆಯಲು ಬರದ ಕಾರಣ, ಮಲೆಯಾಳಂ ಮತ್ತು ಕನ್ನಡ ಭಾಷೆ ಗೊತ್ತಿರುವಂತಹ ಶ್ರೀ. ಸಿ. ಪಿ. ಪಿ. ವಕೀಲರು, ಪೊನ್ನಂಪೇಟೆ ರವರನ್ನು ಸಾಕ್ಷಿದಾರರ ಹೇಳಿಕೆಯನ್ನು ದಾಖಲುಮಾಡಿಕೊಳ್ಳಲು ತರ್ಜುಮೆದಾರರಾಗಿ ನೇಮಕ ಮಾಡಿಕೊಳ್ಳಲಾಯಿತು ಹಾಗು ತರ್ಜುಮೆದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು.

ಬೆಂಗಳೂರಿಗೆ ಹೋಗಲು ತೋಲ್ಪಟ್ಟಿ ರಸ್ತೆ ಮಾರ್ಗವಾಗಿ ಬರುತ್ತಿರುವಾಗ ದಿ. 29.05.2017 ರಂದು ಆರೋಪಿಗಳು ನನ್ನ ಕಾರನ್ನು ಚಾಲನೆಯಲ್ಲಿರುವಾಗ ತಡೆಯುತ್ತಿದ್ದರು. ಅವರಿಬ್ಬರು ಕುಡಿದಿದ್ದರು. ಹೇಗೂ ನಾನು overtake ಮಾಡಿಕೊಂಡು ಮುಂದೆ ಹೋಗುತ್ತಿದ್ದಾಗ ಪೂಜೆಕಲ್ಲು ಸ್ಥಳದಲ್ಲಿ ರಾತ್ರಿ 11.00 ಗಂಟೆ ಸಮಯದಲ್ಲಿ 12 ಜನ ವ್ಯಕ್ತಿಗಳು ರಸ್ತೆಯಲ್ಲಿ ಅಡ್ಡ ನಿಂತು ಗಾಡಿಯನ್ನು ಅಡ್ಡ ನಿಲ್ಲಿಸಿ ನನ್ನ ಕಾರನ್ನು ನಿಲ್ಲಿಸಿದರು. ಇವರುಗಳು ಆರೋಪಿತರ ಸ್ನೇಹಿತರಾಗಿರುತ್ತಾರೆ. ಅಡ್ಡಗಟ್ಟಿ ನಿಲ್ಲಿಸಿದ ಜಾಗಕ್ಕೆ ಈ ಆರೋಪಿಗಳು ಬಂದರು. 2 ನೇ ಆರೋಪಿ wheel spanner ನಿಂದ ನನ್ನ ತಲೆಗೆ ಹೊಡೆದರು. ನನಗೆ ಪ್ರಜ್ಞೆ ತಪ್ಪಿ ಬಿದ್ದು ಹೋದೆ. ಮರುದಿನ ಬೆಳಿಗ್ಗೆ ನನಗೆ ಪ್ರಜ್ಞೆ ಬಂತು, ಅಲ್ಲಿಯವರೆಗೂ ನಾನು ರಸ್ತೆಯ ಪಕ್ಕದಲ್ಲಿದ್ದ ಗುಂಡಿಯಲ್ಲಿ ಬಿದ್ದಿದ್ದೆ. ನನ್ನ ಗಾಡಿಯ 4 ಟೈರ್‌ಗಳನ್ನು ತೂತು ಮಾಡಿರುತ್ತಾರೆ. ನಂತರ ನಾನು ಕುಟ್ಟ ಪೊ. ಠಾಣೆಗೆ ಹೋದೆ. ನಂತರ ನನಗೆ ಪೊಲೀಸರು ಆ ಸ್ಥಳಕ್ಕೆ ರಾತ್ರಿ 12.00 ಗಂಟೆ ಸಮಯದಲ್ಲಿ ಬಂದಿದ್ದರು ಎಂದು ಗೊತ್ತಾಯಿತು. ನಂತರ ಮಾನಂದವಾಡಿ ಪೊ. ಠಾಣೆಗೆ ಹೋಗಿ ದೂರು ಕೊಟ್ಟೆ, ನಂತರ ಆಸ್ಪತ್ರೆಗೆ ಹೋಗಿ ದಾಖಲಾದೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿ. 29.05.2017 ರಂದು Swift car ನಲ್ಲಿ ನಾನು ಹೋಗಬೇಕಾದರೆ ಆರೋಪಿಗಳು ಅವರ ಕಾರಿನಲ್ಲಿ ರಸ್ತೆ ದಾರಿ ಬಿಡುವ ವಿಚಾರಕ್ಕೆ ನಮ್ಮನ್ನು ಅಡ್ಡ ಗಟ್ಟಿ ಮುಂದೆ ಹೋಗದಂತೆ ತಡೆದು ನಮ್ಮಗಳನ್ನು ಕುರಿತು 1 ನೇ ಆರೋಪಿಯು ನಾನು ಬಿ ಜೆ ಪಿ ಕಾರ್ಯಕರ್ತ ಇದು ನನ್ನ ವ್ಯಾಪ್ತಿಯ ಜಾಗವಾಗಿದ್ದು ಕಾರನ್ನು overtake ಮಾಡಲು ನಿನಗೆ ಎಷ್ಟು ದೈರ್ಯ ನಮ್ಮನ್ನು ಇಲ್ಲಿಂದ ಜೀವಂತವಾಗಿ ಹೋಗಲು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. Swift car ಚಲಿಸುತ್ತಿದ್ದ ಚಾಸಾ 2 ರವರ ಮುಖದ ಭಾಗಕ್ಕೆ 1 ನೇ ಆರೋಪಿ ಕೈ ಯಿಂದ ಗುದ್ದಿ ಹಲ್ಲೆ ಮಾಡಿದ ಎಂದರೆ ಸರಿ. 2 ನೇ ಆರೋಪಿ ತನ್ನ ಕೈ ಯಲ್ಲಿದ್ದ wheel spanner ತಲೆಗೆ ಹೊಡೆದು ರಕ್ತ ಗಾಯಪಡಿಸಿದ ಎಂದರೆ ಸರಿ. ನನಗೆ ಮತ್ತು ಚಾಸಾ 2 ರಿಂದ 4 ರವರೆಗೆ ಕೈ ಯಿಂದ ಗುದ್ದಿ ಹಲ್ಲೆ ಮಾಡಿದರು ಎಂದರೆ ಸರಿ. ನಂತರ ತಿರುನಲ್ಲಿ ಪೊ. ಠಾಣೆಗೆ ಹೋಗಿ ದೂರು ನೀಡಿದೆ ಎಂದರೆ ಸರಿ.

ತಿರುನಲ್ಲಿ ಪೊಲೀಸರು ದಿ. 01.06.2017 ರಂದು ಸ್ಥಳ ಮಹಜರ್ ಮಾಡಿದರು ಎಂದರೆ ಸರಿ. ಕೃತ್ಯ ಸ್ಥಳದ ಆಧಾರದ ಮೇಲೆ ಕುಟ್ಟ ಪೊ. ಠಾಣೆಗೆ ಈ ದೂರನ್ನು ವರ್ಗಾವಣೆ ಮಾಡಿದರು ಎಂದರೆ ಸರಿ. ದಿ. 24.08.2017 ರಂದು ಕುಟ್ಟ ಪೊಲೀಸರು ಪೂಜೆ ಕಲ್ಲು ಕುಟ್ಟ ಗ್ರಾಮದಲ್ಲಿ ಕೃತ್ಯ ಸ್ಥಳ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿ.

ಸಾಕ್ಷಿಯು ತಿರುನಲ್ಲಿ ಪೊಲೀಸರು ನೀಡಿರುವ ದಾಖಲೆಯನ್ನು ನೋಡಿ ಗುರುಸಿತಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ. ವ. ವರದಿಯ contents ಗಳನ್ನು ನೋಡಿ ಗುರುತಿಸಿದ್ದು ನಿ ಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**C.C. No. 810/2017** **PW – 3**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಡಿ. ಆರ್ ಜೆ. ವಕೀಲರಿಂದಃ</u>

ಆರೋಪಿಗಳು ಮತ್ತು ನಾವು ಕೇರಳ ರಾಜ್ಯದವರು ಎಂದರೆ ಸರಿ. ತೋಲ್ಪಟ್ಟಿ ಕುಟ್ಟ ರಾಜ್ಯ ಹೆದ್ದಾರಿ ಎಂದರೆ ಸರಿ. ವಾಹನಗಳ ಓಡಾಟ ಹೆಚ್ಚು ಎಂದರೆ ಸರಿ. ತಿರುನಲ್ಲಿ ಸಮೀಪವಿರುವ Thett ರಸ್ತೆಯಲ್ಲಿ ಆರೋಪಿಗಳು ಇನ್ನು ಸಿಕ್ಕಿರಲಿಲ್ಲ, ಆದ್ದರಿಂದ ಆ ರಸ್ತೆಯ ಬಳಿ ಯಾವುದೇ ಹಲ್ಲೆ ಮಾಡಿರುವುದಿಲ್ಲ.ನಾನು ಉಳಿದ ಚಾಸಾ 2 ರಿಂದ 3 ರವರು ಸ್ನೇಹಿತರು ಎಂದರೆ ಸರಿ. ಪೂಜೆಕಲ್ಲು ಸ್ಥಳದಲ್ಲಿ ನನಗೆ ದಾಳಿ ಮಾಡಿದ ವ್ಯಕ್ತಿಗಳು ಯಾರು ಎಂದು ಗೊತ್ತಿಲ್ಲ. ಸಾಜಿತ್ ನನ್ನ ವ್ಯಾಪಾರ partner ಎಂದರೆ ಸರಿ. ಇವರಿಗೆ ಕೇರಳದಲ್ಲಿ ದನದ ಮಾಂಸದ ಅಂಗಡಿ ಇದೆ ಎಂದರೆ ಸರಿ. ಆಗಾಗ ಪೂಜೆ ಕಲ್ಲು ಮುಖಾಂತರ ಕುಟ್ಟದಿಂದ ನಾನು ಜೀವಂತ ಹಸುಗಳನ್ನು ಸಾಗಿಸುತ್ತಿದ್ದೆ ಎಂದರೆ ಸರಿ. ನಾನು ಚಾಸಾ 2 ರಿಂದ 3 ರವರ ಜೊತೆ ಇದರ partner ಆಗಿದ್ದೆ ಎಂದರೆ ಸರಿ. ಗಾಡಿಯ ಚಕ್ರಗಳನ್ನು ಹಾನಿ ಮಾಡಿದ ವ್ಯಕ್ತಿ ಯಾರು ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ, ಆರೋಪಿಗಳೇ ಮಾಡಿರುತ್ತಾರೆ. ಆ ಗುಂಪಿನಲ್ಲಿ ನನ್ನ ಗಾಡಿಯಲ್ಲಿದ್ದ ಹಣವನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 3 ತಿಂಗಳ ನಂತರ ಪೊಲೀಸರಿಗೆ ಹೇಳಿಕೆ ಕೊಟ್ಟೆ, ನಾನು ಅಕ್ರಮ ಜಾನುವಾರಗಳನ್ನು ಸಾಗಾಟಣೆ ಮಾಡುವುದು ಪೂಜೆಕಲ್ಲು ಜನರಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ, ಅದಕ್ಕೆ ಆ ಗಲಾಟೆ ಅಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗಳು ಏನು ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಮರು ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ